ಮೂಲ ದಾವಾ ನಂಃ 116/2015

ಡಿ ಡಬ್ಲುಃ 2

ಸಾಕ್ಷಿಯನ್ನು ದಿನಾಂಕಃ **22-09-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಕೆ ಎಸ್ ಬಿ., ವಕೀಲರಿಂದಃ**

ನಾನು ಉದಾಹರಣೆಯಲ್ಲಿ ವಾದಿಗೆ ಹಕ್ಕಿಲ್ಲ ಎಂದು ಹೇಳಿದ್ದು ಇರುತ್ತದೆ. ಅದೇ ರೀತಿ ಉದಾಹರಣೆಯಲ್ಲಿ ದಾವಾಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂದು ಹೇಳಿ ಬರೆಸಿರುತ್ತೇನೆ. ನನ್ನ ಉದಾಹರಣೆಯ ಪ್ಯಾರ ನಂ.7 ರಲ್ಲಿ "ಕಾರಣ ವಾದಿಯರು ತಮ್ಮ ಅಂಶತಃ ಹಕ್ಕು ಊರ್ಜಿತದಲ್ಲಿ ಇದೆ ಅಂತ ಪುರಾವೆ ಮಾಡಿದ್ದಾಗ್ಯೂ, ವಾದಿಯರ ಹಕ್ಕನ್ನು ಮೃತ ನಾರಾಯಣ ಹೆಗಡೆ ಈತನಿಗೆ ವಿಂಗಡಿಸಿದ ಆಸ್ತಿಯಲ್ಲಿ ಪಡೆಯತಕ್ಕದಿದ್ದು, ದಾವಾ ಸ್ಥಳಗಳ ವಾಂಟಣಿ ಕೋರಿ ಸಲ್ಲಿಸಿದ ಈ ದಾವಾ ನಡೆಯಲಾರದು" ಎಂದು ಹೇಳಿದ್ದೇನೆ ಎಂದರೆ ಸರಿ. ಉದಾಹರಣೆಯಲ್ಲಿ " ಒಂದುವೇಳೆ ವಾದಿಯ ಹಕ್ಕು ದಾವಾ ಡಿಕ್ರಿ ಆಗುವಲ್ಲಿಯೂ ಸಹ ಈ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ಖರೀದಿಸಿದ ಸ್ಥಳಗಳನ್ನು 1 ನೇ ಪ್ರತಿವಾದಿಯ ಹಿಸ್ಸೆಗೆ ಅಥವಾ

ಈ ಪ್ರತಿವಾದಿಯ ಹಿಸ್ಸೆಗೆ ವಿಂಗಡಿಸಿಕೊಡಬೇಕಾಗಿ ಅರಿಕೆ" ಎಂದು ಪ್ರತಿವಾದ ಪತ್ರದಲ್ಲಿ ಬರೆದಿದ್ದೀರಿ ಅಲ್ಲವೇ ಎಂದರೆ ಸಾಕ್ಷಿಯು ಆ ರೀತಿ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಮುಂದುವರೆದು ಸಾಕ್ಷಿಯು 1 ನೇ ಪ್ರತಿವಾದಿಯರ ಬೇರೆ ಏನಾದರೂ ಆಸ್ತಿ ಇದ್ದರೆ ವಾದಿಯರು 1 ನೇ ಪ್ರತಿವಾದಿಯಿಂದ ಹಿಸ್ಸೆ ಪಡೆಯಬೇಕು ಎಂದು ಅದರ ಅರ್ಥವಾಗಿರುತ್ತದೆ ಎಂದು ನುಡಿದಿರುತ್ತಾರೆ. ದಾವಾಸ್ತಿಗಳು ಕೃಷ್ಣ ವಿಶ್ವೇಶ್ವರ ಹೆಗಡೆ ಇವರ ಹೆಸರಿನಲ್ಲಿ ಇತ್ತು. ನಾನು ಆಸ್ತಿ ಖರೀದಿಸಬೇಕಾದರೆ ಕೃಷ್ಣ ವಿಶ್ವೇಶ್ವರ ಹೆಗಡೆ ಹಾಗೂ ಅವರ ಮನೆಯಲ್ಲಿರುವ ಎಲ್ಲರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಅದೇ ರೀತಿ ನಾನು ವಾದಿಯ ಮೃತ ಗಂಡ ನಾರಾಯಣ ಹೆಗಡೆ ಈತನ ಸಹಿಯನ್ನು ಪಡೆದುಕೊಂಡಿದ್ದೇನೆ. ಕುಟುಂಬದ ಎಲ್ಲರ ಸಹಿಗಳನ್ನು ವಕೀಲರು ಹೇಳಿದ್ದರಿಂದ ಪಡೆದುಕೊಂಡಿರುತ್ತೇನೆ. ವಕೀಲರು ಎಲ್ಲರ ಸಹಿಗಳನ್ನು ಯಾಕೆ ಪಡೆಯಲು ಹೇಳಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಾನು ಪಡೆದ ಆಸ್ತಿಯು ಕುಟುಂಬದ ಆಸ್ತಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಆ ಕುಟುಂಬಕ್ಕೆ ನಾರಾಯಣ ಹೆಗಡೆ ಇವರಿಗೂ ಹಕ್ಕಿತ್ತು ಎಂದು ನನಗೆ ತಿಳಿದಿಲ್ಲ. ಆ ಕುಟುಂಬದಲ್ಲಿ ವಾಂಟಣಿ ಆದ ಬಗ್ಗೆ ನಾನೇನು ಚೌಕಾಸಿ ಮಾಡಿದ್ದು ಇರುವುದಿಲ್ಲ. ಸಾಕ್ಷಿಗೆ ನೀವು ದಾವಾಸ್ತಿಗಳನ್ನು ಖರೀದಿಸುವಾಗ ಕೃಷ್ಣ ವಿಶ್ವೇಶ್ವರ ಹೆಗಡೆ ಇವರ ಕುಟುಂಬದಲ್ಲಿ ಇದ್ದ ಎಲ್ಲರಿಗೂ ಹಕ್ಕಿತ್ತು ಅಲ್ಲವೇ ಎಂದರೆ ಸಾಕ್ಷಿಯು ಕೇವಲ ಕೃಷ್ಣ ವಿಶ್ವೇಶ್ವರ ಹೆಗಡೆ ಇವರಿಗೆ ಮಾತ್ರ ಹಕ್ಕಿತ್ತು ಎಂದು ನುಡಿದಿರುತ್ತಾರೆ. ಕೃಷ್ಣ ವಿಶ್ವೇಶ್ವರ ಹೆಗಡೆ ಇವರಿಗೆ ಅವರ ತಂದೆಯವರಿಂದ ಆಸ್ತಿ ಬಂದಿತ್ತು. ನಾರಾಯಣ ಹೆಗಡೆ, ಕೃಷ್ಣ ವಿಶ್ವೇಶ್ವರ ಹೆಗಡೆರವರ ಖಾಸಾ ಸಹೋದರ ಎಂದರೆ ಸರಿ. ನಾನು ಒಟ್ಟು 2 ಕ್ರಯ ಪತ್ರಗಳನ್ನು ಮಾಡಿದ್ದೇನೆ. 1 ನೇ ಕ್ರಯ ಪತ್ರದಲ್ಲಿ 339/10 ಇದನ್ನು ಖರೀದಿಸಿದ್ದೇನೆ. 339/10 ಇದನ್ನು ಖರೀದಿಸುವಾಗ ಆರ್ ಟಿ ಸಿ ಯಲ್ಲಿ ಕೃಷ್ಣ ವಿಶ್ವೇಶ್ವರ ಹೆಗಡೆ ಇವರ ಹೆಸರಿನಲ್ಲಿತ್ತು. ಇನ್ನೊಂದು ಕ್ರಯ ಪತ್ರದಲ್ಲಿ 336/27 ಹಾಗೂ 336/19 ಈ ಸರ್ವೇ ಸಂಖ್ಯೆ ಆಸ್ತಿಗಳನ್ನು ಖರೀದಿಸಿದ್ದೇನೆ. ಈ ಎರಡು ಸರ್ವೇ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಕೃಷ್ಣ ವಿಶ್ವೇಶ್ವರ ಹೆಗಡೆ ಹಾಗೂ ನನ್ನ ತಂದೆ ಪರಮೇಶ್ವರ ಸುಬ್ರಾಯ ಹೆಗಡೆ ಇವರಿಗೆ 1/2 ಅಂಶ ಇತ್ತು. ನನ್ನ ತಂದೆ ಹಾಗೂ ಕೃಷ್ಣ ವಿಶ್ವೇಶ್ವರ ಹೆಗಡೆ ಇವರ ಇಬ್ಬರ ಹೆಸರು ಬಿಟ್ಟರೆ ಬೇರೆ ಯಾರದ್ದೂ ಹೆಸರು ಇದ್ದದ್ದು ಇರುವುದಿಲ್ಲ. ಕೃಷ್ಣ ವಿಶ್ವೇಶ್ವರ ಹೆಗಡೆ ಇವರಿಗೆ ಹಕ್ಕು ಅವರ ತಂದೆಯಿಂದ ಬಂದದ್ದಾಗಿರಬಹುದು. ಕ್ರಯ ಪತ್ರದಲ್ಲಿ, ನಾನು ಯಾವ ಕಾರಣಕ್ಕಾಗಿ ಕುಟುಂಬದ ಎಲ್ಲ ಸದಸ್ಯರ ಸಹಿಯನ್ನು ಏತಕ್ಕೆ ಪಡೆದುಕೊಂಡದ್ದು ಎಂಬ ಬಗ್ಗೆ ನಮೂದಿದಿಯೇ ಎಂದರೆ ಸಾಕ್ಷಿಯು ನಮೂದಿದ್ದ ಬಗ್ಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ನಾನು ಕ್ರಯಪತ್ರ ಮಾಡುವಾಗ ನಾನು ಕ್ರಯ ಪತ್ರದಲ್ಲಿ ಕೃಷ್ಣ ವಿಶ್ವೇಶ್ವರ ಹೆಗಡೆ ಇವರಿಗೆ ಮಾತ್ರವೇ ಸೇರಿದ ಆಸ್ತಿ ಎಂದು ನಮೂದಿಸಿದ್ದರ ಬಗ್ಗೆ ನೆನಪಿಲ್ಲ. ಕ್ರಯಪತ್ರವಾದ ನಂತರ ಮ್ಯುಟೇಶನ್ ಎಂಟ್ರಿ ಆಗುವ ಪೂರ್ವದಲ್ಲಿ ನ್ಯಾಯಾಲಯದಿಂದ ನೋಟೀಸು ಬಂದಿದ್ದು ಇರುವುದಿಲ್ಲ. ನಾನು ಖರೀದಿಸಿದ ಆಸ್ತಿಗೆ ಸಂಬಂಧಿಸಿದಂತೆ ಮ್ಯುಟೇಶನ್ ಎಂಟ್ರಿಯಲ್ಲಿ ನನ್ನ ಹೆಸರು ಯಾವಾಗ ನಮೂದಾಗಿತ್ತು ಎಂದು ನನಗೆ ನೆನಪಿಲ್ಲ. ಉದಾಹರಣೆ ಸಲ್ಲಿಸುವ ಸಂದರ್ಭದಲ್ಲಿ ಯಾವ ಸಂದರ್ಭದಲ್ಲಿ ಮ್ಯುಟೇಶನ್ ಎಂಟ್ರಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಸಲ್ಲಿಸುವ ಪೂರ್ವದಲ್ಲಿಯೇ ಮ್ಯುಟೇಶನ್ ಎಂಟ್ರಿ ನನ್ನ ಹೆಸರಿಗೆ ನಮೂದಾಗಿದೆ ಎಂದು ನುಡಿದಿರುತ್ತಾರೆ. ದಾವಾ ಸಲ್ಲಿಸುವ ಪೂರ್ವದಲ್ಲಿಯೇ ಮ್ಯುಟೇಶನ್ ಎಂಟ್ರಿ ನನ್ನ ಹೆಸರಿಗೆ ನಮೂದಾಗಿದೆ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಸಲ್ಲಿಸಿದ

ದಾಖಲೆಗಳನ್ನು ನೋಡಿ ಯಾವ ದಿನ ಮ್ಯುಟೇಶನ್ ಎಂಟ್ರಿ ನನ್ನ ಹೆಸರಿಗೆ ದಾಖಲಾಯಿತು ಎಂದು ನೋಡಿ ಹೇಳಲು ಸಾಧ್ಯವೇ ಎಂದರೆ ನನಗೆ ದಾಖಲೆಯ ಬಗ್ಗೆ ಜಾಸ್ತಿ ಮಾಹಿತಿ ಇಲ್ಲದೇ ಇರುವುದರಿಂದ ನೋಡಿ ಹೇಳಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. ದಾವಾ ದಾಖಲಾದ ನಂತರ ನ್ಯಾಯಾಲಯವು ನನ್ನ ವಿರುದ್ಧ ನಾನು ಖರೀದಿಸಿದ ಆಸ್ತಿಯಲ್ಲಿ ಮ್ಯುಟೇಶನ್ ಎಂಟ್ರಿ ನನ್ನ ಹೆಸರಿನಲ್ಲಿ ಆಗದೇ ಇದ್ದಂತೆ ನಿರ್ಬಂಧಕಾಜ್ಞೆ ಕೊಟ್ಟಿದ್ದು ಇರುವುದಿಲ್ಲ. ನನಗೆ ನಿರ್ಬಂಧಕಾಜ್ಞೆಯ ನೋಟೀಸು ಜಾರಿಯಾದದ್ದು ಇರುವುದಿಲ್ಲ. ನನಗೆ ನಿರ್ಬಂಧಕಾಜ್ಞೆಯ ನೋಟೀಸು ಜಾರಿಯಾಗಿದ್ದರೂ ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ನಿರ್ಬಂಧಕಾಜ್ಞೆ ಇದ್ದರೂ ಸಹ ತಾಲ್ಲೂಕ ಕಚೇರಿಯಲ್ಲಿ ನನ್ನ ಹೆಸರನ್ನು ಮ್ಯುಟೇಶನ್ ಎಂಟ್ರಿಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶ ಉಲ್ಲಂಘನೆ ಆಗುತ್ತದೆ ಎಂಬ ಕಾರಣದಿಂದ ನಾನು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿಯೇ ಮ್ಯುಟೇಶನ್ ನನ್ನ ಹೆಸರಿನಲ್ಲಿ ನಮೂದಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಮ್ಮ ವಿರುದ್ಧ ತಹಶೀಲ್ದಾರ್ ಇವರ ಬಳಿ ಆರ್ ಟಿ ಎಸ್ ಪ್ರಕರಣ ನಡೆದಿತ್ತು ಎಂದರೆ ಸಾಕ್ಷಿಯು ನಡೆದಿತ್ತು ಹಾಗೂ ಅದರನ್ವಯ ಮ್ಯುಟೇಶನ್ ಎಂಟ್ರಿ ನನ್ನ ಹೆಸರಿನಲ್ಲಿ ನಮೂದಾಗಿದೆ ಎಂದು ನುಡಿದಿರುತ್ತಾರೆ. ಆರ್ ಟಿ ಎಸ್ ಪ್ರಕರಣದಲ್ಲಿ ನಾನು, ನನ್ನ ವಕೀಲರ ಮೂಲಕ ಹಾಜರಾಗಿದ್ದೆನು. ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ರೆಕಾರ್ಡನ್ನು ನನ್ನ ಹೆಸರಿನಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶಕ್ಕೆ ಯಾವುದೇ ಮನ್ನಣೆ ನೀಡದೇ ಇರುವುದರಿಂದ ಅದರ ಉಲ್ಲಂಘನೆಗೆ ನಾನು ಬಾಧ್ಯಸ್ಥ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗೆ ಹಕ್ಕಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ 1 ನೇ ಪ್ರತಿವಾದಿಯರೆಲ್ಲ ಸೇರಿಕೊಂಡು ವಾದಿಯ ಹಕ್ಕನ್ನು ನಷ್ಟ ಮಾಡುವ ಸಲುವಾಗಿ ಸುಳ್ಳು ಕ್ರಯಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರದಿಂದ ವಾದಿಯ ಹಕ್ಕು ನಷ್ಟವಾದದ್ದಾಗಲೀ ಹಾಗೂ ನನಗೆ ಹಕ್ಕು ಪ್ರಾಪ್ತವಾದದ್ದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**